# ಧರ್ಮಾವರಂ ರೇಷ್ಮೆ ಸೀರೆ ಧಮಾಕಾ!



ಧರ್ಮಾವರಂ ಸೀರೆ ಮದುವೆಗಳಂಥ ಶುಭ ಸಮಾರಂಭಗಳಲ್ಲಿ ಉಡಲು ಹೇಳಿಮಾಡಿಸಿದಂತಿದೆ. ಕಾಂಚೀಪುರ ಸೀರೆಗಳಷ್ಟು ದುಬಾರಿಯಲ್ಲದ ಈ ರೇಷ್ಮೆ ಸೀರೆ ಫ್ಯಾಷನ್ ಲೋಕದಲ್ಲಿ ಎಂದಿಗೂ ಔಟ್‌ಡೇಟೆಡ್ ಎನಿಸುವುದೇ ಇಲ್ಲ.

■ ಡಾ.ವೈ.ಸಿ. ರಾಧಾಲಕ್ಷ್ಮಿ
■ ಮುಕುಂದ್ ಕಿರಸೂರ್

ಕಾಂಚೀಪುರಂ, ಪೋಚಂಪಲ್ಲಿ ಮತ್ತು ಅರಣಿ ರೇಷ್ಮೆ ಸೀರೆಗಳ ತುರುಸಿನ ಪೈಪೋಟಿಯ ಹೊರತಾಗಿಯೂ ಧರ್ಮಾವರಂ ರೇಷ್ಮೆಗಳು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಕಾಯ್ದುಕೊಂಡಿವೆ. ವಿಶಾಲವಾದ ಗಾಢ ಬಣ್ಣದ ಅಂಚುಗಳು, ಜರಿ ಕೆಲಸಗಳೊಂದಿಗೆ ನೇಯ್ಗೆ ಮಾಡಲಾದ ಪರಸ್ಪರ ಸಂಯೋಜಿತ ಬಣ್ಣಗಳ ಸೆರಗುಗಳಿಗೆ ಹೆಸರುವಾಸಿಯಾದ ಇವು ಮದುವೆ ಮುಂತಾದ ಶುಭ ಸಮಾರಂಭಗಳಲ್ಲಿ ಬಹು ಬೇಡಿಕೆಯ ಸೀರೆಗಳು.

ವೈಭವೋಪೇತ ಸೆರಗುಗಳು, ಸಮೃದ್ಧ ಬುಟ್ಟ ಕೆಲಸ ಮತ್ತು ಪುಷ್ಪ ವಿನ್ಯಾಸಗಳು ಈ ಸೀರೆಗಳ ವಿಶಿಷ್ಟ ಲಕ್ಷಣಗಳಾಗಿವೆ. ಸೂರತ್ ಮತ್ತು ಕಾಂಚೀಪುರಂನಿಂದ ಶುದ್ಧ ಚಿನ್ನದ ಜರಿಯನ್ನು ಪಡೆಯಲಾಗುತ್ತದೆ. ಕೃತಕ ಜರಿಯೂ ಬಳಕೆಯಲ್ಲಿದೆ. ಈ ಸೀರೆ ನೋಡಲು ಥೇಟ್ ಕಾಂಚೀಪುರಂ ಸೀರೆಗಳಂತೆ ಕಂಡರೂ ಇವುಗಳ ವಿಶಿಷ್ಟ ಅವಳಿ ಬಣ್ಣಗಳು, ದೊಡ್ಡ ಅಂಚುಗಳು, ಭವ್ಯ ಸೆರಗು ಇವುಗಳಿಗೆ ಪ್ರತ್ಯೇಕತೆ ತಂದುಕೊಟ್ಟಿವೆ. ಕಾಂಚೀಪುರಂ ಸೀರೆಗಳಲ್ಲಿ ಸೆರಗನ್ನು 'ಕೊರ್ವಾಯಿ' ಕೆಲಸದಿಂದ ಒಡಲಿಗೆ ಜೋಡಿಸಿರುತ್ತಾರೆ. ಕೆಲವರು ಕಾಂಚೀಪುರಂ ಸೀರೆಗಳನ್ನು ಧರ್ಮಾವರಂನಲ್ಲಿ ನೇಯ್ಗೆಮಾಡಿ, ಅವುಗಳನ್ನು ಕಾಂಚೀಪುರಂ ಸೀರೆಗಳೆಂದು ಕಾಂಚೀಪುರಂ ಮಾರುಕಟ್ಟೆಯಲ್ಲೇ ಮಾರಾಟ ಮಾಡುತ್ತಾರೆ ಎಂದು ಹೇಳಲಾಗುತ್ತದೆ. ನೋಡಲು ಕಂಚಿ ಸೀರೆಗಳಂತೆ ಕಂಡರೂ ಧರ್ಮಾವರಮ್ ಸೀರೆಗಳು ಅವುಗಳಂತೆ ದುಬಾರಿಯಲ್ಲ.

ಧರ್ಮಾವರಂ ಸೀರೆಯನ್ನು ನೋಡಿದ ಕ್ಷಣವೇ ನಿಮ್ಮ ಗಮನ ಸೆಳೆಯುವುದು ಅದರ ಉಜ್ವಲ ಬಣ್ಣಗಳು ಮತ್ತು ಎದ್ದು ಕಾಣುವ ಬಣ್ಣಗಳ ಸಂಯೋಜನೆ! 'ಸೀರೆಯ ಬಣ್ಣದ ಬೇಡಿಕೆಗಳನ್ನು ತಿಳಿಯಲು ಮಾರುಕಟ್ಟೆಯ ಪ್ರತಿಕ್ರಿಯೆಯನ್ನು ಅಧ್ಯಯನ ಮಾಡುವುದರ ಜೊತೆಗೆ ಮಾರಾಟಗಾರರು ಮತ್ತು ಗ್ರಾಹಕರೊಂದಿಗೆ ಮಾತನಾಡಬೇಕು. ಅವರ ಅಭಿರುಚಿ ಬಹಳ ಮುಖ್ಯ' ಎನ್ನುತ್ತಾರೆ ಧರ್ಮಾವರಂನ ರುಕ್ಮಿಣಿ ಸಿಲ್ಕ್ಸ್‌ನ ಶ್ರೀಧರ್. ನೂಲನ್ನು ಮಗ್ಗಕ್ಕೆ ಹಾಕುವ ಮೊದಲು, ಹಾಸುಹೊಕ್ಕುಗಳ ವರ್ಣ ಸಂಯೋಜನೆಯ ಪರಿಣಾಮಗಳನ್ನು ಅವರು ಅಧ್ಯಯನ ಮಾಡುತ್ತಾರೆ.

ಕಾಲ ಮತ್ತು ಜನರ ಅಭಿರುಚಿಗೆ ತಕ್ಕಂತೆ ಯಾವುದೇ ಸಂಪ್ರದಾಯವು ಕೂಡಾ ಬದಲಾವಣೆಗೆ ಸಾಕ್ಷಿಯಾಗುತ್ತದೆ. ಧರ್ಮಾವರಂ ರೇಷ್ಮೆ ನೇಯ್ಗೆಯೂ ಇದಕ್ಕೆ ಹೊರತಾಗಿಲ್ಲ. ಕಂಪ್ಯೂಟರ್ ವಿನ್ಯಾಸಗಳ ಪರಿಚಯದೊಂದಿಗೆ ವಿನ್ಯಾಸಗಳ ಪರಿಕಲ್ಪನೆ ಮತ್ತು ವಿಸ್ತಾರಗಳಿಗೆ ಆಕಾಶವೇ ಮಿತಿ ಎಂಬಂತಾಗಿದೆ. ಇಲ್ಲಿನ ಹೆಚ್ಚಿನ ನೇಕಾರರು ತಮ್ಮ ಪೂರ್ವಜರು ರಚಿಸಿದ ವಿನ್ಯಾಸಗಳಿಗೆ ಜೋತುಬಿದ್ದರೆ, ಅನೇಕರು ಮಾರುಕಟ್ಟೆ ಪ್ರವೃತ್ತಿಯನ್ನು ಅಧ್ಯಯನ ಮಾಡಿ ವಿನ್ಯಾಸಗಳನ್ನು ರಚಿಸುತ್ತಾರೆ. ಆದರೂ ಧರ್ಮಾವರಂ ಸಾಂಪ್ರದಾಯಿಕ ವಿನ್ಯಾಸಗಳ ಸ್ವಂತಿಕೆಗೆ ಧಕ್ಕೆಯಾಗದಂತೆ ಸಾಕಷ್ಟು ಕಾಳಜಿ ವಹಿಸಲಾಗುತ್ತದೆ. ಈಗಲೂ ಈ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇದೆ ಎಂದರೆ ಅದಕ್ಕೆಬಹುಶಃ ಇದೂ ಒಂದು ಕಾರಣವಿರಬಹುದು.

## ಸಂಪ್ರದಾಯ-ಆಧುನಿಕತೆಯ ಸಂಗಮ

ಸಾಂಪ್ರದಾಯಿಕ ಮಾವು, ರುದ್ರಾಕ್ಷಿ, ಆನೆ, ನವಿಲು, ಜಿಂಕೆ, ಎಲೆಗಳು ಮುಂತಾದ ವಿನ್ಯಾಸಗಳನ್ನು ಶ್ರೀಧರ್ ಅವರ ಉತ್ಪನ್ನಗಳಲ್ಲಿ ಬಳಸಲಾಗುತ್ತಿದೆಯಾದರೂ ಅವುಗಳನ್ನು ಮಾರ್ಪಡಿಸಿ, ಬೇರೆಯದ್ದೇ ವಿಶಿಷ್ಟ ರೂಪ ನೀಡಲಾಗುತ್ತದೆ. ಇಲ್ಲಿ ಹಳೆಯದು ಹೊಸದರಲ್ಲಿ ಬೆರೆತು ಹೋಗುತ್ತದೆ. ಆದರೆ ಈ ಸಂಯೋಜನೆಯಿಂದ ಹೊರಹೊಮ್ಮುವ ವಿನ್ಯಾಸ ಮಾತ್ರ ಮತ್ತಷ್ಟು ಸೃಜನಶೀಲ ಹಾಗೂ ಅನನ್ಯವಾಗಿರುತ್ತದೆ.

'ಮೂಲ ವಿನ್ಯಾಸದ ಪರಿಕಲ್ಪನೆಗಳು